(ಇಂದು ದಿನಾಂಕ 13-07-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ಈ ಕೇಸಿನಲ್ಲಿ ಸಾಕ್ಷಿ ಹೇಳಲು ನನಗೆ ಕೊಟ್ಟಂತಹ ಅಧಿಕಾರ ಪತ್ರವನ್ನು ಹಾಜರ ಪಡಿಸಿದ್ದೇನೆ. ಆರೋಪಿಗೆ ಸಾಲ ಕೊಡಲಾಗಿದೆ ಎಂದು ಹೇಳಲಾದ ಸಮಯದಲ್ಲಿ ಸದರಿ ಶಾಖೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಆರೋಪಿಗೆ ನಮ್ಮ ಸೊಸೈಟಿಯಿಂದ ರೂ. 1,30,000/- ಸಾಲ ಮಂಜೂರು ಮಾಡಲಾಗಿದೆ. ಆರೋಪಿ ಪಿಗ್ಮಿ ಮುಖಾಂತರ ರೂ. 60,000/- ವನ್ನು ತುಂಬಿದ್ದಾರೆ ಎಂದರೆ ಸಾಕ್ಷಿ ಒಟ್ಟೂ ರೂ. 63,188/-ಗಳನ್ನು ತುಂಬಿದ್ದಾರೆ ಎಂದು ಹೇಳುತ್ತಾರೆ . ಈಗಲೂ ಸಹ ಆರೋಪಿ ಪಿಗ್ಮಿ ಮುಖಾಂತರ ತಿಂಗಳಿಗೆ ರೂ. 5,000/- ತುಂಬುತ್ತಿದ್ದಾರೆ ಎಂದರೆ ಸಾಕ್ಷಿ ಈಗ 2-3 ತಿಂಗಳಿನಿಂದ ತುಂಬುತ್ತಿಲ್ಲ ಎಂದು ಹೇಳುತ್ತಾರೆ . 2021 ರಲ್ಲಿ ಕೋವಿಡ್ ಇರುವುದರಿಂದ ಆರೋಪಿ ವ್ಯವಹಾರದಲ್ಲಿ ತನಗೆ ನಷ್ಟ ಆಗಿದೆ ಎಂದು ಸೊಸೈಟಿಗೆ ತಿಳಿಸಿದ್ದ ಎಂದರೆ ಸಾಕ್ಷಿ ಮೌಖಿಕವಾಗಿ ತಿಳಿಸಿದ್ದರು ಎಂದು ಹೇಳುತ್ತಾರೆ . ಬಡ್ಡಿ ಹಣ ಕಡಿಮೆ ಮಾಡಿದರೆ ಹಣವನ್ನು ತುಂಬುತ್ತೇನೆ ಎಂದು ಆರೋಪಿ ಹೇಳಿದ್ದರಿಂದ ನಮ್ಮ ಸೊಸೈಟಿಯವರು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ಕಟ್ಟುತ್ತಿರುವಂತಹ ಪಿಗ್ಮಿ ಹಣವನ್ನು ಸಹ ನಾವು ತೆಗೆದುಕೊಳ್ಳುತ್ತಿಲ್ಲ ಅನ್ನುವುದು ಸರಿಯಲ್ಲ. ಸಾಮಾನ್ಯವಾಗಿ ಸಾಲ ಮಂಜೂರು ಮಾಡುವಾಗ ಭದ್ರತೆಗಾಗಿ ಚೆಕ್‌ನ್ನು ನಾವು ಪಡೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಚೆಕ್ ಕೊಡಲಿಲ್ಲ ಎಂದರೆ ನಾವು ಸಾಲ ಮಂಜೂರು ಮಾಡುವುದಿಲ್ಲ ಎಂದು ಹೇಳುತ್ತೇವೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಪಡೆದಂತಹ ಚೆಕ್ ನ ಖಾತೆಗೆ ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಅದನ್ನು ನಾವು ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಕೊಟ್ಟಂತಹ ನೋಟಿಸು ಆತನಿಗೆ ಜಾರಿ ಆಗಿಲ್ಲ ಅನ್ನುವುದು ಸರಿಯಲ್ಲ. ಕಂತಿನ ಮೂಲಕ ಅವಕಾಶ ಮಾಡಿಕೊಟ್ಟರೆ ಆತ ತುಂಬಲು ತಯಾರಿದ್ದಾನೆ ಎಂದು ಸೊಸೈಟಿ ಬಂದು

ತಿಳಿಸಿದ್ದಾನೆ ಎಂದರೆ ಸರಿ. ಕಾನೂನುಬದ್ಧವಾಗಿ ಮರುಪಾವತಿಸುವ ಯಾವುದೇ ಹಣ ಆರೋಪಿಯಿಂದ ಬರಬೇಕಾಗಿರುವುದು ಇಲ್ಲ ಅನ್ನುವುದು ಸರಿಯಲ್ಲ. ಸುಳ್ಳು ಕೇಸನ್ನು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ